सत्यमेव जयते

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ಸಂಖ್ಯೆ:ರಾಚುಆ: 11 :ಟಿಜೆಡ್‌ಪಿ:2016

ನಂ.8, 1ನೇ ಮಹಡಿ, ಕರ್ನಾಟಕ ರಾಜ್ಯ ಸಹಕಾರ
ಮಾರಾಟ ಮಂಡಳಿ ಕಟ್ಟಡ (ಹಿಂಭಾಗ),
ಕನ್ನಿಂಗ್‌ಹ್ಯಾಮ್ ರಸ್ತೆ,
ಬೆಂಗಳೂರು, ದಿನಾಂಕ: 15-02-2016

## -: ಪತ್ರಿಕಾ ಪ್ರಕಟಣೆ :-

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಸಾರ್ವತ್ರಿಕ ಚುನಾವಣೆಗಳು, 2016 ರ ಸಂಬಂಧ ಮೊದಲನೇ ಹಂತದಲ್ಲಿ ಮತದಾನವಾದ 15 ಜಿಲ್ಲೆಗಳ ಪೈಕಿ, ಇಂದು ಮರುಮತದಾನವಾದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ 2-ಹಲಗೇರಿ ತಾಲ್ಲೂಕು ಪಂಚಾಯತ್ ಕ್ಷೇತ್ರದ ಮತಗಟ್ಟೆ ಸಂಖ್ಯೆ 66 ರಲ್ಲಿ ಶೇ.66.81 ರಷ್ಟು ಮತದಾನವಾಗಿರುತ್ತದೆ.

ಭಾರತೀಯ ಸೇನೆಯ ಯೋಧ ಶ್ರೀ ಹನುಮಂತಪ್ಪ ಕೊಪ್ಪದ್ ರವರ ವೀರಮರಣದಿಂದ ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಬೆಟದೂರು ಗ್ರಾಮದ ಮತಗಟ್ಟೆ ಸಂಖ್ಯೆ 84 ರಿಂದ 87 ರವರೆಗಿನ ಒಟ್ಟು ನಾಲ್ಕು ಮತಗಟ್ಟೆಗಳಲ್ಲಿ ದಿನಾಂಕ: 13-02-206 ರಂದು ನಡೆಯಬೇಕಿದ್ದ ಮತದಾನವು ಮುಂದೂಡಲ್ಪಟ್ಟು, ಇಂದು ನಡೆದಿರುತ್ತದೆ. ಸದರಿ ಮತಗಟ್ಟೆಗಳಲ್ಲಿ ಶೇ. 67.82 ರಷ್ಟು ಮತದಾನವಾಗಿರುತ್ತದೆ.

ಮತದಾನವು ಶಾಂತಿಯುತವಾಗಿ ನಡೆದಿರುತ್ತದೆ. ಯಾವುದೇ ಅಹಿತಕರ ಘಟನೆಗಳು ನಡೆದಿರುವುದಿಲ್ಲವೆಂದು ವರದಿಯಾಗಿರುತ್ತದೆ.

(ಆರ್.ಚಂದ್ರಶೇಖರ್)
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ.

D:\MJ\Press Note.docx